**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.09.12.2024**

## ಪಾಟಿ ಸವಾಲುಃ ವಾದಿಗಳ ಪರ ಶ್ರೀ.ಎಂ ವಿ ಜಿ ವಕೀಲರಿಂದಃ

1. ವಾದಿಗಳು ಈ ದಾವೆಯನ್ನು ಯಾವ ಪರಿಹಾರ ಕೋರಿ ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿರುವ ವಿಚಾರಗಳನ್ನು ನಮ್ಮ ವಕೀಲರು ನನಗೆ ತಿಳಿಸಿರುತ್ತಾರೆ. ಈ ದಾವೆಯನ್ನು ವಾದಿಗಳು ಭಾಗಂಶವನ್ನು ಕೋರಿ ಸಲ್ಲಿಸಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ಸಂಖ್ಯೆ, ವಿಸ್ತೀರ್ಣ ಮತ್ತು ಚೆಕ್ಕುಬಂದಿ ಗೊತ್ತಿರುತ್ತದೆ. ದಾವಾ ಆಸ್ತಿಯು ಮೂಲತಃ ಮುನಿನಂಜಪ್ಪ ನ ಮಗ ತಮ್ಮಯ್ಯಪ್ಪ ರವರಿಗೆ ಸೇರಿತ್ತು ಎಂದರೆ ಸರಿ. ಸದರಿ ತಮ್ಮಯ್ಯಪ್ಪ ರವರಿಗೆ ವಾದಿಗಳು ಮತ್ತು 1 ನೇ ಪ್ರತಿವಾದಿ ಮಕ್ಕಳು ಎಂದರೆ ಸರಿ. ದಾವಾ ಆಸ್ತಿಯನ್ನು ತಮ್ಮಯ್ಯಪ್ಪ ರವರು 1962 ರಲ್ಲಿ ಖರೀದಿ ಮಾಡಿದ ನಂತರ ಅವರ ಮಕ್ಕಳು ಮತ್ತು ತಮ್ಮಯ್ಯಪ್ಪ 1995 ರವರೆಗೆ ಒಟ್ಟು ಕುಟುಂಬದಲ್ಲಿ ಅನುಭವಿಸುತ್ತಿದ್ದರು ಎಂದರೆ ಸರಿ.

2. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ನಮಗೆ ಮಾರಾಟ ಮಾಡುವ ಹಕ್ಕು ಹೇಗೆ ಬಂತು ಎಂದು ನಾನು ತಿಳಿದುಕೊಂಡಿರುತ್ತೇನೆ. ಆ ರೀತಿ ವಾದಿಗಳು ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯ ಹೆಸರಿಗೆ ಯಾವುದೇ ರೀತಿಯ ಬರವಣಿಗೆ ಮಾಡಿಕೊಟ್ಟಿರುವುದಿಲ್ಲ. ದಾವಾ ಆಸ್ತಿಯನ್ನು ತಮ್ಮಯ್ಯಪ್ಪ ರವರು 2 ನೇ ಪ್ರತಿವಾದಿಗೆ ಅಡಮಾಣ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ತಮ್ಮಯ್ಯಪ್ಪ ಮತ್ತು ಅವರ ಮಕ್ಕಳು ವರದನಹಳ್ಳಿ ಗ್ರಾಮಕ್ಕೆ ವಲಸೆ ಹೋಗಿ ಸೇರಿಕೊಂಡರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ 1 ನೇ ಪ್ರತಿವಾದಿ ಪಂಡಿತಪುರದಲ್ಲಿ ಒಬ್ಬರೇ ಇದ್ದರು ಎಂದರೆ ಸರಿ. ಅಡಮಾಣ ಪತ್ರ ಬಿಡುಗಡೆ ಆಗುವ ಮೊದಲೇ ತಮ್ಮಯ್ಯಪ್ಪ ರವರು ತೀರಿಕೊಂಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತದ ನಂತರ ವಾದಿಗಳು ಮತ್ತು 1 ನೇ ಪ್ರತಿವಾದಿಗಳು ದುಡಿಮೆ ಮಾಡಿ 2 ನೇ ಪ್ರತಿವಾದಿಗೆ ಅಡಮಾಣದ ಹಣವನ್ನು ಪಾವತಿ ಮಾಡಿದ ನಂತರ 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಅಡಮಾಣ ಬಿಡುಗಡೆ ನೊಂದಣಿ ಪತ್ರ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ಅಡಮಾಣ ಬಿಡುಗಡೆ ಆದ ನಂತರ ದಾವಾ ಆಸ್ತಿಯನ್ನು ವಿಭಾಗ ಮಾಡುವಂತೆ ವಾದಿಗಳು 1 ನೇ ಪ್ರತಿವಾದಿಯ ಬಳಿ ಕೇಳಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಕುಟುಂದ ವಿಚಾರಗಳನ್ನು ಮರೆಮಾಚಿ ನನಗೆ ಸುಳ್ಳು ಹೇಳಿದ್ದಾರೆ ಎಂದರೆ ಸರಿಯಲ್ಲ. ತದ ನಂತರ ವಾದಿಗಳು ದಾಖಲೆಗಳನ್ನು ಪರಿಶೀಲಿಸಿದಾಗ ಕಂದಾಯ ದಾಖಲೆಗಳಲ್ಲಿ ನನ್ನ ಹೆಸರು ಉಲ್ಲೇಖ ಆಗಿದ್ದ ಕಾರಣ ವಾದಿಗಳು ನನಗೆ ನೋಟಿಸ್ ನೀಡಿದ್ದರು ಎಂದರೆ ಸರಿಯಲ್ಲ.

ದಿಃ31.05.1996 ರಂದು ದಾವಾ ಆಸ್ತಿ ನನ್ನ ಹೆಸರಿಗೆ ಕ್ರಯ ಪತ್ರ ಆಗಿರುತ್ತದೆ. ಸಾಕ್ಷಿ ಮುಂದುವರಿದು ಸದರಿ ಕ್ರಯ ಪತ್ರಕ್ಕೆ ವಾದಿಗಳು ಸಹ ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಿಡಿ-2 ರಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ, ಆ ಕಾರಣದಿಂದ ನಿಡಿ-2 ನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ನನ್ನ ಸಹಿ ಇಲ್ಲದೇ ಇರುವ ಕಾರಣ, ದಾವಾ ಆಸ್ತಿಗೂ ನನಗೂ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

4. ನಿಡಿ-3 ರಿಂದ 9 ನ್ನು ನಕಲು ಕ್ರಯ ಪತ್ರದ ಆಧಾರದ ಮೇಲೆ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಲಿಖಿತ ಹೇಳಿಕೆಯ 17 ನೇ ಖಂಡಿಕೆಯಲ್ಲಿ ತಿಳಿಸಿರುವಂತೆ ನಾನು 1 ನೇ ಪ್ರತಿವಾದಿಯ ಭಾಗಕ್ಕೆ ಬರುವ ಆಸ್ತಿಗೆ ಮಾತ್ರ ಹಕ್ಕುದಾರನಾಗಿದ್ದು, ವಾದಿಗಳ ಭಾಗಕ್ಕೆ ಬರುವ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-2 ಕೇವಲ 1 ನೇ ಪ್ರತಿವಾದಿಯ ಭಾಗಕ್ಕೆ ಮಾತ್ರ ಅನುವಹಿಸುತ್ತಿದ್ದು, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.07.08.2024**

**ಪಾಟಿ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ.ಆರ್ ಟಿ ಎನ್ ವಕೀಲರಿಂದಃ**

1. ನನ್ನ ತಂದೆ ಈ ದಾವೆ ಸಲ್ಲಿಸುವ ಮೊದಲೇ ಸುಮಾರು 4-5 ವರ್ಷಗಳ ಹಿಂದೆ ತೀರಿಕೊಂಡಿದ್ದರು. ದಾವಾ ಆಸ್ತಿಯನ್ನು ನನ್ನ ತಂದೆ 1962 ರಲ್ಲಿ ಖರೀದಿಸಿದ್ದರು ಎಂದರೆ ಸರಿ. ಆಗ ನನಗೆ ಸುಮಾರು 7-10 ವರ್ಷಗಳು ಆಗಿತ್ತು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನನ್ನ ತಂದೆ 2 ನೇ ಪ್ರತಿವಾದಿಗೆ ಭೋಗ್ಯ ಮಾಡಿದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಭೋಗ್ಯ ವನ್ನು ತಿಳುವಳಿ ಮಾಡಿದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ಜೀವಂತವಿದ್ದಾಗ ಸಾಲಕ್ಕಾಗಿ ಭೋಗ್ಯ ಮಾಡಿದ್ದೀರ ಎಂದು ಕೇಳಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮುನಿಯಪ್ಪ, ಅಶ್ವತಪ್ಪ ಮತ್ತು ನಾನು ಅಣ್ಣ ತಮ್ಮಂದಿರು ಎಂದರೆ ಸರಿ. ನಾನು ಇತರ ವಾದಿಗಳು ಈಗ ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ಈಗ ದಾವಾ ಆಸ್ತಿಯನ್ನು ಹೊರತು ಪಡಿಸಿ ನಮ್ಮ ಆಸ್ತಿಗಳನ್ನು ಬೇರೆ ಬೇರೆ ಅನುಭೋಗ ಮಾಡುತ್ತಿದ್ದೇವೆ ಎಂದರೆ ಸಾಕ್ಷಿ ಯಾವುದೇ ಆಸ್ತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

2. ನಾನು ಮತ್ತು ಇತರ ವಾದಿಗಳು ಬೇರೆಯವರ ಮನೆಯಲ್ಲಿ ವಾಸವಾಗಿದ್ದೇವೆ. ಈ ಬಗ್ಗೆ ಕರಾರು ಪತ್ರ ಅಥವಾ ಬಾಡಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಾವು ವಾಸವಾಗಿರುವ ಮನೆ ನಮ್ಮ ಹೆಸರಿನಲ್ಲಿ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ-1(ಎ) ರವರು ಈ ಹಿಂದೆ ನ್ಯಾಯಾಲಯದಲ್ಲಿ ನೀಡಿದ್ದ ವಿಚಾರಣೆ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಸದರಿಯವರು ದಾವಾ ಆಸ್ತಿಯನ್ನು ಹೊರತು ಪಡಿಸಿ ಬೇರೆ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೇವೆ ಎಂದು ತಿಳಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಯಾವುದೇ ಜಮೀನು ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು 1972 ರಲ್ಲಿ ನನ್ನ ತಂದೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ನಮ್ಮ ವಕೀಲರಿಗೆ ಯಾರು ಮಾಹಿತಿ ನೀಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯಲ್ಲಿ 3 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಈಗಿನ ಪಹಣಿ ನಾನು ನೋಡಿರುವುದಿಲ್ಲ.

3. ದಾವಾ ಆಸ್ತಿಯ ಸರ್ವೆ ನಂ.9/2 ಆಗಿರುತ್ತದೆ. ದಾವಾ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯಲ್ಲಿ ನಾವು ವ್ಯವಸಾಯ ಮಾಡುತ್ತಿದ್ದರೆ ಅಕ್ಕಪಕ್ಕದಲ್ಲಿ ಯಾರಿದ್ದಾರೆ

ಎಂದು ಗೊತ್ತಾಗುತ್ತದೆ ಎಂದರೆ ಸಾಕ್ಷಿ ನಾನು ಕೂಲಿ ಮಾಡುತ್ತೇನೆ ಎಂದು ನುಡಿಯುತ್ತಾರೆ. ನಾನು ಯಾವತ್ತೂ ಸಹ ದಾವಾ ಆಸ್ತಿಯ ಅನುಭೋಗದಲ್ಲಿ ಇಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

ಪಿಡಬ್ಲೂ-1                                                                                    ಓ.ಎಸ್.ನಂ.721/2011

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.29.01.2024**

## ಮುಂದುವರಿದ ಪಾಟಿ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಆರ್ ಟಿ ಎನ್ ವಕೀಲರಿಂದಃ

1. ವಿಭಾಗ ಮಾಡಿಕೊಂಡಿರುವುದಕ್ಕೆ ಸಂಬಂದಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಸರ್ವೆ ನಂ.10/1 1 ಎಕರೆ 22 ಗುಂಟೆ ದೊ

ಡ್ಡಬಳ್ಳಾಪುರ ಕೋಳಿಪುರದಲ್ಲಿ ಬರುತ್ತದೆ. ದಿಃ21.04.1971 ರ ಕ್ರಯ ಪತ್ರದಲ್ಲಿ ಉಳಿಕೆ ಜಮೀನನ್ನು ಉಳಿಸಿಕೊಂಡ ಬಗ್ಗೆ ಉಲ್ಲೇಖ ಇದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಅಡಮಾಣ ಮಾಡಿದ್ದ ಬಗ್ಗೆ ಮತ್ತು ಹಣ ಪಾವತಿ ಮಾಡಿದ್ದ ಬಗ್ಗೆ ಯಾವುದೇ ದಾಖಲಾತಿ ಬರೆಸಿಕೊಂಡಿರುವುದಿಲ್ಲ ಎಂದರೆ ಸರಿ. ನಾವು ಪ್ರತಿ ವರ್ಷ ದಾವಾ ಆಸ್ತಿಗೆ ಸಂಬಂದಿಸಿದ ದಾಖಲಾತಿಗಳನ್ನು ತೆಗೆದು ಕಂದಾಯ ಪಾವತಿ ಮಾಡುತ್ತೇವೆ ಎಂದರೆ ಸರಿ. ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂದಿಸಿದಂತೆ ಎಲ್ಲಾ ಕಂದಾಯ ಪಾವತಿ ಮಾಡಿದ್ದೇವೆ ಎಂದರೆ ಸರಿ. ಅದಕ್ಕೆ ಸಂಬಂದಿಸಿದಂತೆ ದಾಖಲೆಗಳನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. 2010 ರಲ್ಲಿ 1 ಎಕರೆಗೆ 10 ಲಕ್ಷ ಮೌಲ್ಯ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾತನೇ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದು ನಾನು ಸ್ವಾದೀನದಲ್ಲಿರುವುದಿಲ್ಲ ಮತ್ತು 1962 ರಲ್ಲಿ ಮಾರಾಟ ಮಾಡಿದ್ದರು ಪ್ರತಿವಾದಿಗಳಿಗೆ ತೊಂದರೆ ಕೊಡಬೇಕು ಎಂದು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**